**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**33/2018**

ಸಿ.ಡಬ್ಲ್ಯೂ –11 ಪಿ.ಡಬ್ಲ್ಯೂ -7

| | | |
|---|---|---|
| ಹೆಸರು | ಃ | ಶರಣಬಸಪ್ಪ |
| ತಂದೆಃಗಂಡ | ಃ | ವಿಠಲ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕಡಗಂಚಿ |

ದಿನಾಂಕಃ05.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1 ರಿಂದ 10, 12 ರಿಂದ 15 ರವರ ಪರಿಚಯ ಇರುತ್ತದೆ. ಮೃತ ಶ್ರೀಶೈಲ ಹಾಗೂ ಶಿವಾನಂದರವರ ಪರಿಚಯ ಇರುತ್ತದೆ. ನನಗೆ ದಿನಾಂಕ ನೆನಪಿರುವುದಿಲ್ಲ . ಅಪಘಾತವಾದಾಗ ಅಪಘಾತದಲ್ಲಿ ಗಾಯವಾದ ವ್ಯಕಿತಗಳನ್ನು ಅಂಬುಲೆನ್ಸನಲ್ಲಿ ನಾವು ಕಲಬುರಗಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ. ಒಬ್ಬ ವ್ಯಕಿತ ಸ್ಥಳದಲ್ಲಿ ಮೃತಪಟ್ಟಿರುತ್ತಾನೆ ಮತ್ತೊಬ್ಬ ವ್ಯಕ್ತಿ ಅಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.03.05.2017 ರಂದು 7.15 ಗಂಟೆಗೆ ನಾನು, ಚಾಸಾ-8 ರಿದ 10 ರವರು ಮಾತನಾಡುತ್ತ ಕುಳಿತಿದ್ದೇವು ಎಂದರೆ ಸರಿ. ಆಗ ಚಾಸಾ-1 ರವರು ಅವರ ತಮ್ಮನಾದ ಶ್ರೀಶೈಲ ವಾಹನ ಸಂಖ್ಯೆ ಕೆಎ-32/ಇಬಿ-3268 ರಲ್ಲಿ ಮನೆಯಿಂದ ಹೊಲಕ್ಕೆ ಹೊಗಿರುತ್ತಾನೆ ಎಂದು ಹೇಳಿದ್ದರು ಎಂದರೆ ಸರಿ. ಎನಡಿಪಿ ಪೆಟ್ರೊಲ ಬಂಕ ಹತ್ತಿರ ಕೆಎ-32/6448 ಆರೋಪಿ ಚಲಾಯಿಸಿಕೊಂಡು ಬಂದು ಮೃತ ಶ್ರೀಶೈಲರವರ ವಾಹನಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯವನ್ನು ನನಗೆ ಚಾಸಾ-1 ರವರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಿ.12.05.2017 ರಂದು ಶ್ರೀಶೈಲರವರು ಅಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದು ನಾನು ಪುರವಣಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆಗ ನನಗೆ ಆರೋಪಿಯನ್ನು ತೋರಿಸಿ ನಾನು ಅವನನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಘಟನೆ ಬಗ್ಗೆ ನಾನು ನರೋಣಾ ಪೋಲಿಸ್‌ರ ಮುಂದೆ ಈ ಕಳಗೆ ಓದಿ ಹೇಳಿದಂತೆ ದಿ

ನಾಂಕ:03.12.2017 ರಂದು ಈಗ ಓದಿ ಹೇಳಿದ ಹಾಗೇ ............ ನೀಡಿದ ಹೇಳಿಕೆ " ಎಂದು ಹೇಳಿಕೆ ಕೊಟ್ಟಿರುತ್ತೆನೆ ಎಂದರೆ ಸರಿ ಅಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-**14** ಎಂದು ಗುರುತಿಸಲಾಯಿತು.

ಸದರಿ ಘಟನೆ ಬಗ್ಗೆ ನಾನು ನರೋಣಾ ಪೋಲಿಸ್‌ರ ಮುಂದೆ ಈ ಕಳಗೆ ಓದಿ ಹೇಳಿದಂತೆ ದಿನಾಂಕ:12.05.2017 ರಂದು ಈಗ ಓದಿ ಹೇಳಿದ ಹಾಗೇ ............ ನೀಡಿದ ಹೇಳಿಕೆ " ಎಂದು ಪುರವಣಿ ಹೇಳಿಕೆ ಕೊಟ್ಟಿರುತ್ತೆನೆ ಎಂದರೆ ಸರಿ ಅಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-**15** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಬಿ.ಐ.ಎಸ್. ವಕೀಲರಿಂದ</u>**

ದಿ.03.05.2017 ರಂದು 7.15 ಗಂಟೆಗೆ ನಾನು, ಚಾಸಾ-8 ರಿದ 10 ರವರು ಮಾತನಾಡುತ್ತ ಕುಳಿತಿದ್ದೇವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ಅವರ ತಮ್ಮನಾದ ಶ್ರಿಶೈಲ ವಾಹನ ಸಂಖ್ಯೆ ಕೆಎ-32/ಇಬಿ-3268 ರಲ್ಲಿ ಮನೆಯಿಂದ ಹೊಲಕ್ಕೆ ಹೊಗಿರುತ್ತಾನೆ ಎಂದು ಹೇಳಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ